ವಿಜಯ ಕರ್ನಾಟಕ

# ಆಗಸದ ಎಲ್ಲೆ ಮೀರಿ ಟೀಂ ಜಟಾಯು



ಎಡದಿಂದ ಬಲಕ್ಕೆ: ಸಂಜಯ್ ಎಸ್.ಆರ್, ಹರ್ಷವರ್ಧನ್, ಸುಲಕ್ಷಣ ಆರ್. ಆರ್ಯ, ತರುಣ್ ರಾಜ್, ಶಿವಪ್ರಸಾದ್ ಎಸ್. ಜಲಿ, ಸಂದೇಶ್ ಶೆಟ್ಟಿ, ವಿವೇಕ್ ಸಿ.ಎಸ್.

ಟೀಂ ಜಟಾಯು, ಜೈನ್ ವಿಶ್ವವಿದ್ಯಾಲಯದ ಅಧಿಕೃತ ಏರೋ ಡಿಸೈನ್ ತಂಡ ಮತ್ತೊಮ್ಮೆ ವಾರ್ಷಿಕ ಎಸ್‌ಎಇ ಏರೋ ಡಿಸೈನ್ ಸ್ಪರ್ಧೆಯಲ್ಲಿ ತನ್ನ ಪ್ರಾಬಲ್ಯವನ್ನು ಮೆರೆದಿದೆ. 28 ಬಲಿಷ್ಠ ತಂಡಗಳಿಂದ ಸ್ಪರ್ಧೆಯನ್ನು ಎದುರಿಸಿದ ಟೀಂ ಜಟಾಯು, ಡಿಸೈನ್ ಓರಲ್ ಪ್ರೆಸೆಂಟೇಶನ್, ಡಿಸೈನ್ ರಿಪೋರ್ಟ್ ಮತ್ತು ಹೈಯೆಸ್ಟ್ ಪೇಲೋಡ್ ಲಿಫ್ಟಿಂಗ್ ವಿಭಾಗಗಳಲ್ಲಿ ಪ್ರಥಮ ಸ್ಥಾನವನ್ನು ತನ್ನ ಮುಡಿಗೇರಿಸಿಕೊಂಡಿತು. ಇದಲ್ಲದೇ, ಸಮಗ್ರಪ್ರಶಸ್ತಿ ವಿಭಾಗದಲ್ಲಿ 5ನೇ ಸ್ಥಾನವನ್ನು ತನ್ನದಾಗಿಸಿಕೊಂಡಿತು.

ಈ ಬಾರಿಯ ಏರೋ ಡಿಸೈನ್ ಸ್ಪರ್ಧೆಯಲ್ಲಿ ಒಟ್ಟು 11 ರಾಷ್ಟ್ರಗಳು ಭಾಗವಹಿಸಿದ್ದವು. ಈಜಿಪ್ಟ್, ಟರ್ಕಿ, ಮೆಕ್ಸಿಕೊ, ಕೆನಡಾ, ಬಾಂಗ್ಲಾದೇಶ, ಪೋಲೆಂಡ್, ಯುಎಸ್‌ಎ ರಾಷ್ಟ್ರಗಳನ್ನು ಪ್ರತಿನಿಧಿಸಿದ್ದ ತಂಡಗಳಿಂದ ಕ್ಲಿಷ್ಟ ಪೈಪೋಟಿಯನ್ನು ಎದುರಿಸಿ, ಜೈನ್ ವಿಶ್ವವಿದ್ಯಾಲಯ ಜಯಶಾಲಿಯಾಗಿ ಹೊರಹೊಮ್ಮಿತು.

ಸ್ಪರ್ಧೆಯಲ್ಲಿ ಏರ್‌ಕ್ರಾಫ್ಟ್ ರನ್‌ವೇ ಅಥವಾ 200 ಅಡಿ ಉದ್ದದ ಸ್ಥಳದ ಅಗತ್ಯವಿಲ್ಲದೆ ಕೈ ಅಥವಾ ಎಂಜಿನಿಯರಿಂಗ್ ತಂತ್ರಜ್ಞಾನವುಳ್ಳ ಉಡಾವಣಾ ಸಿಸ್ಟಮ್ ಸಹಾಯದಿಂದ ಉಡಾಯಿಸಬೇಕೆಂಬ ನಿಯಮ ಇತ್ತು. ಇದೇ ನಿಟ್ಟಿನಲ್ಲಿ ವಿದೇಶದಿಂದ ಆಮದು ಮಾಡಿಕೊಂಡಂತಹ ಬಾಸ್ಲವುಡ್ ಸಹಾಯದಿಂದ, ಕೇವಲ 340 ಗ್ರಾಂ ತೂಕದ ವಿಮಾನವನ್ನು ತಯಾರಿಸಿ, ವಿವಿಧ ವಿಭಾಗಗಳಲ್ಲಿ ಜಯಗಳಿಸುವ ಮೂಲಕ ತ್ರಿವರ್ಣ ಧ್ವಜವನ್ನು ವಿದೇಶದಲ್ಲಿ ಹಾರಿಸಿದ್ದು ಜೈನ್ ವಿಶ್ವವಿದ್ಯಾಲಯದ ಟೀಂ ಜಟಾಯು ಹೆಗ್ಗಳಿಕೆ. ನಾವು ರೂಪಿಸಿದ್ದ ಅನೇಕ ಮಾಡೆಲ್‌ಗಳು ಪರೀಕ್ಷಾ ಹಂತದಲ್ಲಿಯೇ ಕ್ರಾಶ್ ಆಗಿಬಿಡುತ್ತಿದ್ದವು. ಆದರೂ ನಾವು ನಮ್ಮ ಪ್ರಯತ್ನವನ್ನು ಕೈ ಬಿಡಲಿಲ್ಲ. ಎಲ್ಲದಕ್ಕೂ ಅಮೆರಿಕ, ಅಮೆರಿಕ ಎನ್ನುವ ನಾವು ಆ ನೆಲದಲ್ಲಿ ನಡೆಯುವ ಇಂತಹ ಕ್ಲಿಷ್ಟ ಸ್ಪರ್ಧೆಯಲ್ಲಿ ಜಯಗಳಿಸಿದಾಗ, ಹೆಮ್ಮೆ ಎನಿಸುತ್ತದೆ. ನಮ್ಮ ಸಾಮರ್ಥ್ಯದ ಮೇಲೆ ಅಪರಿಮಿತ ವಿಶ್ವಾಸ ಮೂಡುತ್ತದೆ ಎಂಬುದು ಟೀಂ ಜಟಾಯುನ ಮನದಾಳದ ಮಾತು.

ಈ ಬಾರಿಯ ಜೈನ್ ವಿಶ್ವವಿದ್ಯಾಲಯ ಏರೋ ಡಿಸೈನ್ ತಂಡದಲ್ಲಿ, ಐಐಎಇಎಂ ಮತ್ತು ಸ್ಕೂಲ್ ಆಫ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ವಿಭಾಗದ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಸಂಜಯ್ ಆರ್, ಶಿವಪ್ರಸಾದ್ ಎಸ್ ಜಲಿ, ಸಂದೇಶ್ ಶೆಟ್ಟಿ, ತರುಣ್ ರಾಜ್, ಹರ್ಷವರ್ಧನ್, ವಿವೇಕ್ ಸಿ ಎಸ್ ತಂಡದ ಸದಸ್ಯರಾಗಿ ಕಾರ್ಯನಿರ್ವಹಿಸಿದರು.